ಸರ್ಕಾರದೊಡನೆ ಪತ್ರ ವ್ಯವಹಾರವನ್ನು ಮಾಡಿ ಅವಧಿ ಮೀರಿದ ಮಾತ್ರೆಗಳನ್ನು ಭಾರತ ಸರ್ಕಾರದ ಅನುಮೋದನೆಯನ್ನು ಪಡೆದ ನಂತರ ನಿಷ್ಕ್ರೀಯ ಮಾಡಲಾಯಿತು. ದಿನಾಂಕ 19.1.1996, 24.2.1996, ಮತ್ತು 1.3.1996ರ ಹಾಯಬೆಂಗಳೂರು ಕನ್ನಡ ವಾರಪತ್ರಿಕೆಯಲ್ಲಿ ಪ್ರಕಟವಾಗಿರುವ ಎಲ್ಲಾ ಔಷಧಿಗಳು ನಿರ್ದಿಷ್ಟವಲ್ಲದ ನಿರಾಧಾರವಾದ ಸಂಗತಿಗಳಾಗಿರುತ್ತವೆ. ಸದರಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಔಷಧಿಗಳ ಹಿಂದೆ ಶ್ರೀ ಡಿ.ಟಿ.ರಾಜನ್, ಫಿಜಿಯೋಥೆರಪಿಸ್ಟ ಎಂಬ ವ್ಯಕ್ತಿಯ ಪ್ರಚೋದನೆ ಇರಬಹುದು. ಶ್ರೀ ಡಿ. ಟಿ. ರಾಜನ್, ಫಿಜಿಯೋಥೆರಪಿ ಕುಷ್ಟರೋಗ ನಿಯಂತ್ರಣ ಕೇಂದ್ರ, ನೆಲಮಂಗಲ, ಇವರು ತಮ್ಮ ವರ್ಗಾವಣೆಯಾದ ನಂತರ ಇತರ ಅಂಶಗಳ ಬಗ್ಗೆ ನಾಗರೀಕರ ಹಕ್ಕು ರಕ್ಷಣ ಸೆಲನ ಸಿ.ಐ.ಡಿ. ವಿಭಾಗವು ಒಂದು ಮನವಿಯನ್ನು ಸಲ್ಲಿಸಿದ್ದು, ಈ ಬಗ್ಗೆ ನಿರ್ದೇಶಕರ ಅಭಿಪ್ರಾಯವನ್ನು ಕೋರಲಾಗಿದೆ. ಇವರು ಎಲ್ಲಾ ದೂರುಗಳನ್ನು ಸಲ್ಲಿಸಿ ತಮ್ಮ ಉದ್ದೇಶವನ್ನು ಸಾಧಿಸುವಂತಹ ಪ್ರವೃತ್ತಿಯನ್ನು ಹೊಂದಿರುತ್ತಾರೆ. ಈ ನೌಕರುಗಳ ವರ್ಗಾವಣೆ ಮತ್ತು ಇನ್ನು ಇತರ ವಿಚಾರಗಳಲ್ಲಿ ಅರ್ಜಿಗಳನ್ನು ಬರೆದು ಮೇಲಾಧಿಕಾರಿಗಳ ಜೊತೆಯಲ್ಲಿ ಅಸಭ್ಯವಾಗಿ ವರ್ತಿಸುವುದು ಹಾಗೂ ಅಸಹಾನಿಯವಾಗಿ ನಡೆದುಕೊಳ್ಳುವುದು ವಿಚಾರದಲ್ಲಿ ಲೋಕಾಯುಕ್ತ ವಿಚಾರಣೆ ನಡೆಸಿ, ಸದರಿ ನೌಕರುಗಳ ಮೇಲೆ ಸೂಕ್ತ ಶಿಸ್ತಿನ ಕ್ರಮವನ್ನು ಜರೂರಿಸಲು ನಿವೇದಿಸಿದೆ. ಡಾ.ಎಂ.ಪಿ.ಹೇಮಾರೆಡ್ಡಿ, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಮೇಲೆ ಮಾಡಿರತಕ್ಕಂತಹ ಎಲ್ಲಾ ದೂರುಗಳು ಸತ್ಯಕ್ಕೆ ದೂರವಾಗಿದೆ.

(3) ರೋಣ ತಾಲ್ಲೂಕಿನ ರೋಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ.

ಶ್ರೀ ಶ್ರೀಶೈಲಪ್ಪ ವಿರೂಪಾಕ್ಷಪ್ಪ ಬಿದನೂರು(ರೋಣ) ಮಾನ್ಯ ಉಪಾಧ್ಯಕ್ಷರೆ, ರೋಣ ತಾಲ್ಲೂಕಿನ, ರೋಣ ಸರ್ಕಾರಿ ಪ್ರಥಮ ದರ್ಜೆಯ ಕಾಲೇಜಿನ ಕಟ್ಟಡ ಕೇವಲ ಒಂದು ಬೋಧನ ಕೊಠಡಿಯನ್ನು ಕಟ್ಟಡವನ್ನು ಕಟ್ಟಲು ಪ್ರಾರಂಭಿಸಲಾಗಿದೆ. ಇದರ ಅವಶ್ಯಕತೆಯಷ್ಟು ಅವಶ್ಯಕತೆಯನ್ನು ಪೂರೈಸಲು ಸರ್ಕಾರದ ಗಮನಕ್ಕೆ ಬಂದಿದೆಯೇ? ಪೂರ್ಣ ಪ್ರಮಾಣದ ಎರಡನೇಯ ಮಹಡಿಯನ್ನು ಕಟ್ಟುವ ವಿಚಾರ ಸರ್ಕಾರಕ್ಕೆ ಇದೆಯೇ? 1996-97ನೇ ಸಾಲಿನ ಅವಶ್ಯಕತೆಗೆ ಅನುಗುಣವಾಗಿ ಬೋಧನ ಕೊಠಡಿಗಳನ್ನು ನಿರ್ಮಾಣ ಮಾಡುವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತದೆಯೇ?

ಶ್ರೀ ಡಿ.ಮಂಜುನಾಥ್ (ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ. ರೋಣ ತಾಲ್ಲೂಕಿನ ರೋಣ ಪ್ರಥಮ ದರ್ಜೆಯ ಕಾಲೇಜಿನ ಮೊದಲನೆಯ ಹಂತದ ಕಟ್ಟಡವನ್ನು ಕಟ್ಟಿ ಮೂಗಿದಿದೆ. ಲೋಕೋಪಯೋಗಿ ಇಲಾಖೆಯು ಸದರಿ ಕಾಲೇಜಿನ ಎರಡನೆಯ ಹಂತದ ಕಟ್ಟಡವನ್ನು ಕಟ್ಟಲು ಅಂದಾಜು ವೆಚ್ಚ ಮತ್ತು ನಕ್ಷೆಯನ್ನು ಸಿದ್ಧಪಡಿಸಿ 1996-97ನೆಯ ಅಯವ್ಯಯದಲ್ಲಿಯು ಸಾಧ್ಯವಾದಷ್ಟು ಅನುದಾನವನ್ನು ಒದಗಿಸಿಕೊಂಡು ಅಪಶ್ಯಕತೆಗೆ ಅನುಗುಣವಾಗಿ ಬೋಧನ ಕೊಠಡಿಗಳನ್ನು ನಿರ್ಮಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

(4) ಬೆಂಗಳೂರಿನ ಕಾವಲ್ ಬೈರಸಂದ್ರ ಸರ್ಕಾರಿ ವಸತಿ ಗೃಹಗಳಿಗೆ ಪ್ರತ್ಯೇಕ ನೀರಿನ ಮೀಟರ್ ಅಳವಡಿಸುವ ಬಗ್ಗೆ.

ಶ್ರೀ ರಾಮಲಿಂಗಾರೆಡ್ಡಿ (ಜಯನಗರ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿರುವ ಕಾವಲ್

ಬೈರಸಂದ್ರದಲ್ಲಿರುವ ಸರ್ಕಾರಿ ವಸತಿ ಗೃಹಗಳಿಗೆ ಪ್ರತ್ಯೇಕ ನೀರಿನ ಮೀಟರಗಳನ್ನು ಅಳವಡಿಸಿರುವುದಿಲ್ಲ. ಇದರಿಂದ ಈ ವಸತಿ ಗೃಹಗಳಿಗೆ ವಾಸಿಸುವ ಸರ್ಕಾರಿ ನೌಕರುಗಳು ಪ್ರತಿ ತಿಂಗಳು ಹೆಚ್ಚು ನೀರಿನ ಬಿಲ್ ಪಾವತಿ ಮಾಡಬೇಕಾಗಿದೆ. ಇದರ ಜೊತೆಗೆ ವಾಣಿಜ್ಯ ದರದಲ್ಲಿ ನೀರನ್ನು ಒದಗಿಸುತ್ತಿರುವುದರಿಂದ ಪ್ರತಿ ತಿಂಗಳು, ಪ್ರತಿ ಮನೆಯವರಿಗೆ 150 ರಿಂದ 200 ರೂಪಾಯಿಗಳನ್ನು ನೀರಿಗಾಗಿ ಪಾವತಿ ಮಾಡಬೇಕಾಗಿದೆ. ಇದರ ಜೊತೆಗೆ ವಾಣಿಜ್ಯ ದರದಲ್ಲಿ ನೀರನ್ನು ಒದಗಿಸುತ್ತಿರುವುದರಿಂದ ಪ್ರತಿ ತಿಂಗಳು, ಪ್ರತಿ ಮನೆಯವರಿಗೆ150ರಿಂದ200ರೂಪಾಯಿಗಳನ್ನು ನೀರಿಗಾಗಿ ಪಾವತಿ ಮಾಡಬೇಕಾಗಿದೆ. ಆದುದರಿಂದ ಪ್ರತಿಯೊಂದು ವಸತಿ ಗೃಹಗಳಿಗೆ ಪ್ರತ್ಯೇಕ ನೀರಿನ ಮೀಟರನ್ನು ಒದಗಿಸಿ ಗೃಹ ಬಳಕೆಯ ದರವನ್ನು ವಿಧಿಸಲು ಸರ್ಕಾರ ಕ್ರಮವನ್ನು ಕೈಗೊಳ್ಳಬೇಕು. ಹಾಗೂ ಈ ವಸತಿ ಗೃಹಗಳನ್ನು ರಿಪೇರಿ ಮಾಡಿಸಿ ಮಳೆಯ ನೀರಿನ ಸೋರಿಕೆಯನ್ನು ತಪ್ಪಿಸಬೇಕೆಂದು ಸನ್ಮಾನ್ಯ ಲೋಕೋಪಯೋಗಿ ಸಚಿವರನ್ನು ಕೋರುತ್ತೇನೆ.

1.40 ಪಿ.ಎಂ.

(5) ದ. ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರತೆಕ್ಕೆ ಕಾಮಗಾರಿಗಳಿಗೆ ಹಣ ಬಿಡುಗಡೆ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪಾಧ್ಯಕ್ಷರೆ, 1993ನೇ ಸಾಲಿನಲ್ಲಿ ಸಮುದ್ರ ಕೊರೆತ ಸಂಭವಿಸಿದಾಗ 12 ತುರ್ತು ಕಾಮಗಾರಿಗಳಿಗೆ 1.86 ಲಕ್ಷ ರೂ. ವೆಚ್ಚದ ಅಂದಾಜು ಪಟ್ಟಿಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಆಡಳಿತ ಅನುಮೋದನೆ ಕೊಡದೆ 1994ನೇ ಸಾಲಿನ 33 ತುರ್ತು ಕಾಮಗಾರಿಗಳಿಗೆ 51.389 ಲಕ್ಷ ರೂ.ಗಳಿಗೆ ಆಡಳಿತ ಅನುಮೋದನೆ ನೀಡಿಯೂ ಹಣದ ಬಿಡುಗಡೆಯ ಪ್ರಕೃತಿ ವಿಕೋಪ ನಿಧಿಯಿಂದ ಬಿಡುಗಡೆ ಆಗದೇ 1995ನೇ ಸಾಲಿನಲ್ಲಿ ಮೆತ್ತೆ ಸಮುದ್ರ ಹಾಗೂ ನದೀ ಕೊರೆತಗಳ26ಕಾಮಗಾರಿಗಳಿಗೆ119.34 ಲಕ್ಷ ರೂ. ಆಡಳಿತ ಅನುಮೋದನೆ ಹಾಗೂ ಹಣವನ್ನು ಬಿಡುಗಡೆ ಮಾಡಿಲ್ಲ. ಸುಮಾರು 50 ಲಕ್ಷ ರೂ.ಗಳ ಕಾಮಗಾರಿ ಸಂಪೂರ್ಣಗೊಂಡಿದೆ. ಈಬಗ್ಗೆ ಸಣ್ಣ ನೀರಾವರಿ ಇಲಾಖೆಯವರು ಮಾನವೀಯ ದೃಷ್ಟಿಯಿಂದ ಊರಿಗೆ ಊರೇ ಮುಳುಗುವ ಸಂದರ್ಭದಲ್ಲಿ ಗುತ್ತಿಗೆದಾರರನ್ನು ಓಲೈಸಿ ಈ ಕಾಮಗಾರಿಗಳನ್ನು ಮಾಡಿಸಿ ಕೊನೆಗೆ ಇದು ಪ್ರಕೃತಿ ವಿಕೋಪ ನಿಧಿಯಿಂದ ಕಂದಾಯ ಇಲಾಖೆಯವರು ಕೊಡಬೇಕಾದುದು ಎಂದು ಹೇಳಿರುವುದು ನಿಜವಾದರೆ 119.34 ಲಕ್ಷ ರೂ.ಗಳಲ್ಲಿ ಕೇವಲ 5 ಲಕ್ಷ ರೂ. ಮಾತ್ರ ಬಿಡುಗಡೆ ಮಾಡಿದುದರಿಂದ ಇನ್ನುಮುಂದೆ ಸಮುದ್ರ ಕೊರೆತ ವಾರದಲ್ಲಿ ಗುತ್ತಿಗೆದಾರರು ಕೆಲಸಮಾಡದಿದ್ದ ಪರಿಸ್ಥಿತಿ ಉದ್ಭವಿಸಿದರೆ ಕಂದಾಯ ಇಲಾಖೆಯವರು ಇದಕ್ಕೆ ಹೊಣೆಗಾರರಾಗಬೇಕಾದೀತು. ಆದ್ದರಿಂದ ಈ ಭೀಕರ ಪ್ರಕೃತಿ ವಿಕೋಪದ ಎಲ್ಲಾ ತುರ್ತು ಕಾಮಗಾರಿಗಳಿಗೆ ತಕ್ಷಣ ಹಣವನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿಸುತ್ತೇನೆ.

- ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) : 1993-94 ಹಾಗೂ 1994-95ನೇ ಸಾಲಿನಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿಗಳ ಬಾಬತ್ತು ಸರ್ಕಾರದಿಂದ ಅನುದಾನ ಒದಗಿಸಿಲ್ಲ. ಆದರೆ ಸದರಿ ಕಾಮಗಾರಿಗಳನ್ನು ಆಗಿನ ಮುಖ್ಯಮಂತ್ರಿಯವರು, ಜಿಲ್ಲಾ ಉಸ್ತುವಾರಿ ಸಚಿವರು, ಹಾಗೂ ಜಿಲ್ಲೆಯ ಇತರ ಸಚಿವರು ಪರಿಶೀಲಿಸಿ ತಾತ್ಕಾಲಿಕ ಗೋಡೆ ನಿರ್ಮಾಣ ಅತೀ